ವಿಡಂಬನೆಯ ಧಾಟಿಯಲ್ಲಿ ಕಥೆಗಳನ್ನು ಬರೆಯುತ್ತಾ ಕಥನ ಕೌಶಲವನ್ನು ಒಲಿಸಿಕೊಂಡ ಶಂಕರ ಪುಣ್ತಾಂಬೇಕರ್ (1923–2016) ಹಲವಾರು ಕಾದಂಬರಿಗಳನ್ನು ಬರೆದಿದ್ದಾರೆ. 'ಏಕ್ ಮಂತ್ರಿ ಸ್ವರ್ಗ್ ಲೋಕ್‌ಮೇ' , 'ಜಹಾಂ ದೇವತಾ ಮರ್ತೇ ಹೇ' ಅವರು ಬರೆದ ಪ್ರಸಿದ್ಧ ವಿಡಂಬನಾ ಕಾದಂಬರಿಗಳು. ವಿಡಂಬನೆಯ ಪದಸಂಗ್ರಹವುಳ್ಳ 'ವ್ಯಂಗ್ಯಕೋಶ' ಎಂಬ ಹಿಂದಿ ಶಬ್ದಕೋಶವನ್ನೇ ಬರೆದಿದ್ದಾರೆ.

ಎರಡು ಜಾತಿಗಳು ಮಾತ್ರ ಇವೆ, ಒಂದು ಬಿಳಿ, ಇನ್ನೊಂದು ಕಪ್ಪು. ಬಿಳಿ ತನ್ನ ಕಪ್ಪು ಬಣ್ಣದ ಮೇಲೆ ಮೆತ್ತಲು ಇದ್ದರೆ, ಕಪ್ಪು ಬೇರೆಯವರ ಬಿಳಿ ಬಣ್ಣದ ಮೇಲೆ ಮೆತ್ತಲು ಇದೆ. ಆದರೆ 'ಕಲಾನೀತಿ'ಯಲ್ಲಿ ಹೀಗಾಗಲ್ಲ. ಅಲ್ಲಿ ವರ್ಣವಿರುವುದಿಲ್ಲ, ಬಣ್ಣಗಳಿರುತ್ತವೆ-ವಿವಿಧ ಬಣ್ಣಗಳು. ಕಲಾನೀತಿಯಲ್ಲಿ ಕಪ್ಪು ಸಹ ಬೇರೆ ಬಣ್ಣದಂತೆ ಸುಂದರವಾಗಿರುತ್ತದೆ. ಕಪ್ಪು ರಾಜಕೀಯದಲ್ಲಿ ಕಾಗೆಯಾಗಿದ್ದು, ಕಲಾನೀತಿಯಲ್ಲಿ ಕೋಗಿಲೆಯಾಗಿದೆ.'

'ಮಂಡೇಲಾ ಸಾಹೇಬ್ರೆ, ನೀವು ಮಹಾನರು. ನೀವು ರಾಜಕೀಯದಲ್ಲಿದ್ದರೂ, ನಿಮಗೆ ಕಲೆಯ ಜ್ಞಾನವಿದೆ.'



'ಕಲಾಕಾರರೇ, ಈಗ ನಿಮಗೆ ನಾನೇನು ಹೇಳಲಿ! ಕೋಗಿಲೆಯ ಚಿತ್ರಗಳು ಬರೆಯಲ್ಪಡುತ್ತಿದ್ದವು, ಆದರೆ ಅದರೊಳಗೆ ಗಿಳಿ ಇರುತ್ತಿತ್ತು. ಒಳಗೆ ಗಿಳಿ, ಪಂಜರದಲ್ಲಿ ಆರಾಮ ಜೀವನ ಸಾಗಿಸುತ್ತಾ ಕಲಿಸಿದ್ದನ್ನೇ ಗಿಳಿ ಹಾಡ್ತಾ ಇತ್ತು.'

'ನೀವು ಏನು ತಗೊಳ್ತೀರ, ಚಹಾ ಅಥವಾ ಕಾಫಿ?'

'ಎರಡನ್ನೂ ಸ್ವಲ್ಪ-ಸ್ವಲ್ಪ ಹೊತ್ತು ಬಿಟ್ಟು ತಗೊಂಡ್ರೆ?' ಮಂಡೇಲಾ ನಗುತ್ತಾ ಹೇಳಿದರು, 'ಈ ಚಹಾ ಮತ್ತು ಕಾಫಿಯಿಂದಲೇ ಜೈಲು ಜೀವನವನ್ನು ಕಳೆದಿದ್ದೇನೆ, ಬ್ರದರ್! ಚಹಾ ಅಭಾವ ಮತ್ತು ಬಡವರ ಏಕಮಾತ್ರ ಆಧಾರ.'

ಅವನು ಮಂಡೇಲಾರಿಗೆ ಕೋಗಿಲೆಯ ಚಿತ್ರವನ್ನು ಬರೆದು ಕೊಟ್ಟ.

ಮಂಡೇಲಾ ತುಂಬಾ ಖುಷಿಯಿಂದ ಅಲ್ಲಿಂದ ಹೊರಟು ಹೋದರು.

ಅವನು ಚಿತ್ರವನ್ನು ಬರೆಯುತ್ತಿದ್ದ. ಆದರೆ ಯಾವ ಚಿತ್ರ ಬರೆಯಲು ಕುಳಿತಿದ್ದನೋ ಅವನಿಗೇ ತಿಳಿದಿರಲಿಲ್ಲ! ಅವನ ಕಣ್ಣುಗಳೆದುರು ಮಸುಕು-ಮಸುಕು. ಮಸುಕಿನಲ್ಲಿ ಚಿತ್ರವನ್ನು ಹುಡುಕಲು ಪ್ರಯತ್ನಿಸುತ್ತಿದ್ದ.

ಆಗಲೇ ಬಾಗಿಲನ್ನು ತಟ್ಟಿದ ಸದ್ದಾಯಿತು.

ಅವನು ಎದ್ದು ಬಾಗಿಲನ್ನು ತೆರೆದಾಗ ಎದುರಿಗೆ ನೋಡುತ್ತಾನೆ: ಎದುರಿಗೆ ಅಮೆರಿಕದ ಮಹಾನ್ ಲೇಖಕರಾದ ಆರ್ಥರ್ ಮಿಲ್ಲರ್ ನಿಂತಿದ್ದಾರೆ!

'ಬನ್ನಿ, ಬನ್ನಿ!' ಚಿತ್ರಕಾರ ಆರ್ಥರ್ ಮಿಲರನ್ನು ಸ್ವಾಗತಿಸಿದ. ನಂತರ ಅಲ್ಲಿಯೇ ಹಲಗೆಯ ಬಳಿಯಿದ್ದ ಕುರ್ಚಿಯಲ್ಲಿ ಕೂರಿಸಿದ.

'ನೀವು ನನ್ನನ್ನು ಗುರುತಿಸಿದಿರಿ, ಇದಕ್ಕಾಗಿ ನಿಮಗೆ ನಾನು ಕೃತಜ್ಞ. ಜನ ಕ್ರೀಡಾಪಟುಗಳು ಮತ್ತು ನಟರನ್ನು ಮಾತ್ರ ಗುರುತಿಸುತ್ತಾರೆ.' 'ನೀವು ನನ್ನ ಬಳಿಗೆ ಬಂದಿರಲ್ಲ, ಇದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಶಬ್ದಗಳ ಮಾಹಾನ್ ಚಿತ್ರಕಾರ ನನ್ನಂಥ ಸಾಮಾನ್ಯ ಕಲಾಕಾರನ ಮನೆಯಲ್ಲಿ!'

'ಬೇಡ ಬ್ರದರ್, ಬೇಡ. ಹೀಗೆ ಹೇಳಬೇಡಿ. ನಿಜ ಹೇಳಬೇಕೆಂದರೆ ನಾನು ನಿಮ್ಮ ಬಳಿಗೆ ಸ್ವಾರ್ಥದಿಂದ ಬಂದಿದ್ದೇನೆ. ನೀವು ನನಗಾಗಿ ಒಂದು ಚಿತ್ರವನ್ನು ಬರೆದುಕೊಡಿ. ನವಿಲಿನ ಚಿತ್ರ!'

'ನವಿಲಿನ ಚಿತ್ರ?'

'ನಿಮಗೆ ಆಶ್ಚರ್ಯವಾಗ್ತಿದೆಯಲ್ಲ!' ಮಿಲರ್ ಹೇಳಿದರು, 'ನನ್ನಂತಹವನು ಮಂಗನ ಚಿತ್ರವನ್ನು ಬರೆಸಬೇಕೆಂದು ನೀವು ಯೋಚಿಸುತ್ತಿರಬೇಕು. ಮಂಗನಿಂದ ಮಾನವ ಅಂತ ನಾವು ಹೇಳ್ತೀವಿ, ಆದರೆ ಈಗ ನಾವು ಅಭಿವೃದ್ಧಿಯೊಂದಿಗೆ ದೇವರಾಗುವ ಜಾಗದಲ್ಲಿ ಮತ್ತೆ ಮಂಗವೇ ಆಗ್ತಿದ್ದೀವಿ, ಐಶ್ವರ್ಯಯುಕ್ತ ಮಂಗ, ಶಕ್ತಿಶಾಲಿ-ಬಲಶಾಲಿ ಮಂಗ, ಜಗತ್ತನ್ನು ನಾಶ ಮಾಡುವಂಥ ಮಂಗ...'